# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು-570 006

ವಿದ್ಯಾರ್ಥಿವೇತನ ಘಟಕ

E-Mail : coordinatorscstcellksou@gmail.com

Ph : 0821-2500073 Ext : 312


ಸಂಖ್ಯೆ: ಕರಾಮುವಿ/ವಿ.ವೇ.ಘಟಕ/ಇತರೆ-30/2023-24

ದಿನಾಂಕ: 16-09-2023

ಗೆ,
ಪ್ರಾದೇಶಿಕ ನಿರ್ದೇಶಕರು,
ಕರಾಮುವಿ, ಪ್ರಾದೇಶಿಕ ಕೇಂದ್ರ
---------------------------

ಮಾನ್ಯರೆ,

ವಿಷಯ: 2020-21ನೇ ಸಾಲಿನಲ್ಲಿ ಶುಲ್ಕ ಪಾವತಿಸಿ ಪ್ರವೇಶಾತಿ ಪಡೆದಿರುವ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳು ವಿದ್ಯಾರ್ಥಿವೇತನವನ್ನು ಮರುಭರಿಕೆ ಮಾಡಿಕೊಳ್ಳುವಂತೆ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಬಗೆಗೆ.

ಉಲ್ಲೇಖ: 1) ಕರಾಮುವಿ/ಹವಿ/ಶಿಷ್ಯವೇತನ/13(ಎ)/2023-24 ದಿನಾಂಕ: 10-08-2023

2) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 14-09-2023

********

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, 2020-21ನೇ ಸಾಲಿನಲ್ಲಿ ಶುಲ್ಕ ಪಾವತಿಸಿ ಪ್ರವೇಶಾತಿ ಪಡೆದು, ಶುಲ್ಕ ಮರುಭರಿಕೆಗೆ ಅರ್ಜಿ ಸಲ್ಲಿಸಿರುವ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿವೇತನವು SSPಯ ಮೂಲಕ ಮಂಜೂರಾಗಿ ಕರಾಮುವಿ ಖಾತೆಗೆ ಜಮೆಯಾಗಿರುತ್ತದೆ. **ಆದರೆ** ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವಂತೆ 939 ವಿದ್ಯಾರ್ಥಿಗಳು ಹಣಕಾಸು ವಿಭಾಗಕ್ಕೆ ಶುಲ್ಕ ಮರುಭರಿಕೆಯ ಅರ್ಜಿ ಸಲ್ಲಿಸಿ ವಿದ್ಯಾರ್ಥಿವೇತನವನ್ನು ಹಿಂಪಡೆಯದ ಕಾರಣ ಒಟ್ಟು ಮೊತ್ತ 40,09,850/- ರೂಗಳು ಖಾತೆಯಲ್ಲಿ ಉಳಿದಿರುತ್ತದೆ. ಈ ಹಿನ್ನೆಲೆಯಲ್ಲಿ 2021-22ನೇ ಸಾಲಿನ ಲೆಕ್ಕ ಪರಿಶೋಧನಾಧಿಕಾರಿಗಳು ಸದರಿ ಮೊತ್ತವನ್ನು ವಿದ್ಯಾರ್ಥಿಗಳಿಗೆ ಪಾವತಿಸದೇ ಬಾಕಿ ಉಳಿಸಿಕೊಂಡಿರುವ ಸಂಬಂಧ ವಿದ್ಯಾರ್ಥಿಗಳಿಗೆ ಅಥವಾ ಸರ್ಕಾರಕ್ಕೆ ಹಿಂಪಾವತಿಸುವಂತೆ ಆಕ್ಷೇಪ ವ್ಯಕ್ತಪಡಿಸಿರುತ್ತಾರೆ.

ಮುಂದುವರೆದು, ಈ ಸಂಬಂಧ **ಅನುಬಂಧ 'ಅ'** ಪಟ್ಟಿಯಲ್ಲಿ ನಮೂದಿಸಿರುವಂತೆ ಪ್ರಾದೇಶಿಕ ಕೇಂದ್ರಗಳಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳಿಗೆ ಆಯಾಯ ಪ್ರಾದೇಶಿಕ ಕೇಂದ್ರಗಳಿಂದ ದೂರವಾಣಿ/ SMS ಅಥವಾ ಪತ್ರ ರವಾನಿಸುವುದರ ಮೂಲಕ ಮಾಹಿತಿ ನೀಡಿ ಸದರಿ ವಿದ್ಯಾರ್ಥಿಗಳಿಂದ ನಿಗದಿತ ದಾಖಲೆಗಳ (ಗುರುತಿನ ಚೀಟಿ,ಪ್ರವೇಶಾತಿ ಶುಲ್ಕ ಪಾವತಿ ರಶೀದಿ,ಪರೀಕ್ಷಾ ಶುಲ್ಕ ಪಾವತಿ ರಶೀದಿ,ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಪಾಸ್ ಪುಸ್ತಕ)ನಕಲು ಪ್ರತಿಗಳನ್ನು ಪಡೆದು, ಹಣಕಾಸು ವಿಭಾಗದ ಶುಲ್ಕ ಮರುಭರಿಕೆಯ **(ಅನುಬಂಧ 'ಆ')** ದೃಢೀಕೃತ ಅರ್ಜಿಯೊಂದಿಗೆ ಹಣಕಾಸು ವಿಭಾಗಕ್ಕೆ ರವಾನಿಸುವಂತೆ ತುರ್ತಾಗಿ ಕ್ರಮವಹಿಸಲು ತಿಳಿಸಲಾಗಿದೆ.

ಕುಲಸಚಿವ

ಪ್ರತಿಗಳು:

1) ವಿಶೇಷಾಧಿಕಾರಿಗಳು, ಮಾನ್ಯ ಕುಲಪತಿಳ ಆಪ್ತ ಶಾಖೆ, ಕರಾಮುವಿ, ಮೈಸೂರು.
2) ಆಪ್ತ ಸಹಾಯಕರು, ಮಾನ್ಯ ಕುಲಸಚಿವರ ಆಪ್ತ ಶಾಖೆ, ಕರಾಮುವಿ, ಮೈಸೂರು.
3) ಹಣಕಾಸು ಅಧಿಕಾರಿಗಳು, ಕರಾಮುವಿ, ಮೈಸೂರು.
4) ಡೀನ್ (ಅಧ್ಯಯನ ಕೇಂದ್ರಗಳು) ಕರಾಮುವಿ, ಮೈಸೂರು.
5) ನೋಡಲ್ ಅಧಿಕಾರಿಗಳು, ಕರಾಮುವಿ ಅಂತರ್ಜಾಲ, ಕರಾಮುವಿ, ಮೈಸೂರು. (ಕರಾಮುವಿ ಅಂತರ್ಜಾಲದಲ್ಲಿ ಪ್ರಕಟಿಸಲು ಕೋರಿದೆ.)
6) ಕಚೇರಿ ಪ್ರತಿ.